VIJAYAKUMAR KANNUR
Digitally signed by VIJAYAKUMAR KANNUR
Date: 2026.07.16 16:13:34 +0530



**ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 14.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ RSP ವಕೀಲರಿಂದ**

ನಾನು ಶಾಲೆ ಕಲಿತಿರುವುದಿಲ್ಲ. ನಾನು 7 ನೇ ತರಗತಿಯವರೆಗೆ ಶಾಲೆ ಕಲಿತಿದ್ದರೂ ಸಹಿತ ಕಲಿತಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನುಡಿಯುವುದೇನೆಂದರೆ ತಾನು 1 ಮತ್ತು 2 ನೇ ತರಗತಿಗೆ ಶಾಲೆಗೆ ದಾಖಲು ಮಾಡಿದ್ದು, ತನಗೆ ಆರೋಗ್ಯ ಚೆನ್ನಾಗಿ ಇರದ ಕಾರಣ ತಾನು ಶಾಲೆಗೆ ಹೋಗಿರುವುದಿಲ್ಲವೆಂದು ಉತ್ತರಿಸುವರು. ನನ್ನ ಗಂಡ 2022 ನೇ ಸಾಲಿನಲ್ಲಿ ಮೃತ ಪಟ್ಟಿರುವರು. ಈ ದಾವೆ ದಾಖಲು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಪ್ರತಿವಾದಿ 1 ರವರಿಗೆ ಎಷ್ಟು ಜನ ಸಹೋದರರು ಎಂದರೆ ಆತನಿಗೆ ಒಬ್ಬ ಸಹೋದರನಿದ್ದು, ಆತ ಮೃತ ಪಟ್ಟಿರುವನು. ನನ್ನ ವಿವಾಹವಾಗುವ ಪೂರ್ವದಲ್ಲೇ ಪ್ರತಿವಾದಿ 1 ಮತ್ತು ಆತನ ಸಹೋದರನ ಮಧ್ಯೆ ಪಾಲು ವಾಟ್ನಿಯಾಗಿರುವುದು. ಈ ಪಾಲು ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲಗೆಳನ್ನು ನೋಡಿರುವುದಿಲ್ಲ, ಆದರೆ ವಿವಾಹದ ಮಾತುಕತೆಯಲ್ಲಿ ಸಮಯದಲ್ಲಿ ಪ್ರತಿವಾದಿ 1 ರವರು ತಮ್ಮ ಪಾಲಿಗೆ 12 ಎಕರೆ ಜಮೀನು ಬಂದಿರುವುದಾಗಿ ಎಂದು ಹೇಳಿರುವರು. ಪ್ರತಿವಾದಿ 1 ರವರ ತಂದೆಯಾದ ವೆಂಕಪ್ಪ ಮಳ್ಳೂರು ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಹೆಣ್ಣು ಮಗಳು ಇದ್ದ ಬಗ್ಗೆ ತಮಗೆ ಮಾಹಿತಿ ನೀಡಿರುವುದಿಲ್ಲ ಎಂದು ಉತ್ತರಿಸುವರು.

2. ಪ್ರತಿವಾದಿ 1 ವಿನ ಸಹೋದರ ಕೃಷ್ಣ ಮೃತ ಪಟ್ಟಿರುವರು ಎಂದರೆ ಸರಿ. ಇತನಿಗೆ ಶೋಭಾ ಎಂಬ ಹೆಂಡತಿ, ಸ್ವಾತಿ ಮತ್ತು ಸಹನಾ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಕೃಷ್ಣ ವಾರಸುದಾರರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ, ಏಕೆಂದರೆ ನನ್ನ ವಿವಾಹವಾಗುವ ಪೂರ್ವದಲ್ಲೇ ಪ್ರತಿವಾದಿ 1 ಮತ್ತು ಆತನ ಸಹೋದರನ ಮಧ್ಯೆ ಪಾಲು ವಾಟ್ನಿ ಮಾಡಿಕೊಂಡಿರುವುದರಿಂದ. ಪ್ರತಿವಾದಿ 3 ರವರು ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುವರು.

ಅವರಿಗೆ ಎಷ್ಟು ಸಂಬಳ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೇ ನಂಬರ್ 121/3 ವಿಸ್ತೀರ್ಣ 32 ಗುಂಟೆ ಜಮೀನು ಪ್ರತಿವಾದಿ 3 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಮನೆತನದಲ್ಲಿ ಪಾಲು ವಾಟ್ನಿಯಾಗಿರುವುದಿಲ್ಲ ಎಂದರೆ ಸರಿ. ದಾದನಟ್ಟಿ ಗ್ರಾಮದಲ್ಲಿ ನಾನು ಮತ್ತು ಪ್ರತಿವಾದಿಯರು ಕೂಡಿ ವಾಸವಿದ್ದಾಗ ನನ್ನ ಹೆಸರಿನಲ್ಲಿ ಜಮೀನು ಖರೀದಿ ಮಾಡಿರುವರು ಎಂದರೆ ಸರಿಯಲ್ಲ, ನನ್ನ ತಂದೆ ನನ್ನ ಹೆಸರಿನಲ್ಲಿ ಖರೀದಿ ಮಾಡಿ ಕೊಟ್ಟಿರುವರು. ನನ್ನ ಗಂಡನ ಚಿಕಿತ್ಸೆಗಾಗಿ ಸದರಿ ಜಮೀನನ್ನು ಮಾರಾಟಕ್ಕೆ ಹಚ್ಚಿದ್ದಾಗ ಬೇರೆಯವರಿಗೆ ಮಾರಾಟ ಮಾಡುವ ಬದಲು ನನ್ನ ತವರು ಮನೆಯವರಿಗೆ ಮಾರಾಟ ಮಾಡಲು ಪ್ರತಿವಾದಿ 1 ರವರು ಹೇಳಿರುವುದರಿಂದ ಆ ಜಮೀನನ್ನು ಮಾರಾಟ ಮಾಡಿರುವೆನು. ಈ ಆಸ್ತಿಯನ್ನು ನನ್ನಗಂಡನ ಮನೆಯ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯಲ್ಲಿ ಪ್ರತಿವಾದಿ 3 ರವರಿಗೆ ಪಾಲು ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಅದನ್ನು ನನ್ನ ತಂದೆಗೆ ಮಾರಾಟ ಮಾಡಿದ್ದೇನೆ ಅಂತ ಸೂಚಿಸುವುದು ಸರಿಯಲ್ಲ. ನನ್ನ ತಂದೆಯನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

3. ನನ್ನ ಗಂಡ ತನ್ನ ಜೀವಿತ ಕಾಲದಲ್ಲಿ ದಾರವಾಡ ತಾಲೂಕಿನ ಗರಗ ಹೋಬಳಿಯ ನೀರಲಕಟ್ಟಿ ಗ್ರಾಮದ ಪ್ಲಾಟ್ ನಂ. 61 ನ್ನು ಖರೀದಿ ಮಾಡಿರುವರು ಎಂದರೆ ಅದು ನನ್ನ ಗಂಡನ ಸ್ವಯಾರ್ಜಿತ ಆಸ್ತಿಯಾಗಿರುವುದು. ನನ್ನ ಗಂಡ ಭಾರತೀಯ ಸೇನೆಯಲ್ಲಿ ನೌಕರಿ ಮಾಡುತ್ತಿದ್ದರು. ಈ ಪ್ಲಾಟ್ ನ್ನು 2013 ರಲ್ಲಿ ನನ್ನ ಗಂಡ ಖರೀದಿ ಮಾಡಿರುವರು ಎಂದರೆ ಸರಿ. ಈ ಪ್ಲಾಟ್ ನ್ನು ಸಹ ನಮ್ಮ ಒಟ್ಟು ಕುಟುಂಬದ ಆದಾಯದಿಂದ ನನ್ನ ಗಂಡ ಖರೀದಿ ಮಾಡಿರುವನು ಅಂತ ಸೂಚಿಸುವುದು ಸರಿಯಲ್ಲ. ನನ್ನ ಗಂಡ ತನ್ನ ಜೀವಿತ ಕಾಲದಲ್ಲಿ ಸರ್ವೇ ನಂಬರ್ 108/6 ರ ಜಮೀನನ್ನು ನನ್ನ ತಂದೆಯ ಹೆಸರಿನಲ್ಲಿ ಖರೀದಿ ಮಾಡಿರುವನು ಎಂದರೆ ಸರಿಯಲ್ಲ, ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವುದು. ಈ ಜಮೀನನ್ನು ಖರೀದಿ ಮಾಡಲು ನನ್ನ ಗಂಡ ಹಣಕಾಸಿನ ಸಹಾಯ ಮಾಡಿರುವನು ಎಂದರೆ ಸರಿಯಲ್ಲ, ನನ್ನ ಸಹೋದರ ಅಮೇರಿಕಾ ದೇಶದಲ್ಲಿ ಇರುವುದರಿಂದ ನನ್ನ ತಂದೆ ಆ ಜಮೀನನ್ನು ಖರೀದಿ ಮಾಡಿರುವರು. ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರೂ ಸಹಿತ ಕಾಲ್ಪನಿಕ ವ್ಯಾಜ್ಯ ಕಾರಣ ಹೇಳಿ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ